

ಎನ್ನುತ್ತಿತ್ತು. ನಾನು ಊಟದ ಸವಿಯನ್ನು ವರ್ಣಿಸಿ, ಮಾಡಿಟ್ಟ ಕೈಗಳಿಗೆ ವಂದಿಸಿ ತಿನ್ನುವ ಸ್ವಭಾವದವನು. ರಾಘು ಡಾಕ್ಟ್ರು ಕೂಡ ಅಂಥವರೇನೆ. ಆದರೆ ಅವರು ಬ್ಯಾಗಿನ ತೀವ್ರ ಚಿಂತೆಯಲ್ಲಿದ್ದರು. ನನ್ನ ಪ್ರತಿ ಮಾತಿಗೂ ಅವರು ಗುರಾಯಿಸುತ್ತಿದ್ದರು.

'ಇಲ್ಲಿ ನಮ್ದೇ ನಮಗಾಗ್ಯೆತೆ. ಬಾಗು ಐತೋ ಇಲ್ಲವೋ ಅನ್ನೋ ಟೆನ್ಷನ್ ಆಗ್ತೈತೆ. ಇವುನು ನೋಡಿದ್ರೆ ಸೊಪ್ಪಿನ ತಾರೀಫು ಮಾಡ್ತವ್ನೆ' ಎನ್ನುವ ಥರ ನೋಡಿದ ಅವರು ತಡೀಲಾರದೆ ಬ್ಯಾಗಿನ ವಿಷಯ ಹೇಳೇ ಬಿಟ್ಟರು. 'ದಯವಿಟ್ಟು ಯಾರಿಗಾದರೂ ಪೋನು ಮಾಡಿ ಹೇಳಿ ಕೆಳಗಿಂದ ತರಿಸಿಬಿಡಿ. ತಂದವರಿಗೆ ಭಕ್ಷೀಸು ಕೊಡೋಣ' ಎಂದರು. 'ಅಯ್ಯೋ ಯಾರೂ ಅಲ್ಲಿ ಸಿಗಲ್ಲ ಸರ್. ಪರಿಚಯಸ್ಥರೂ ಊರಲಿಲ್ಲ. ನೀವೇನು ಚಿಂತೆ ಮಾಡಬೇಡಿ, ಊಟ ಮಾಡಿ ನಾನು ಹೋಗಿ ಬರುತ್ತೇನೆ' ಎಂದು ಕೃಷ್ಣಕುಮಾರಿ ಹೊರಟು ನಿಂತರು.

'ಕಮ್ಮಿ ಬಿಪಿಯಾಗಿ ಅವಳು ಹೋಗೇ ಬಿಟ್ಟಿದ್ದಳು ಸರ್. ಬದುಕು ಉಳಿದಿದ್ದೇ ಹೆಚ್ಚು. ಬೆಟ್ಟ ಹತ್ತಿಳಿಯುವಾಗ ಹೆಚ್ಚು ಕಮ್ಮಿಯಾದರೇಂತ ಉಪ್ಪು ಸಕ್ಕರೆ ಮಡಿಲಲ್ಲಿ ಕಟ್ಟಿಕೊಂಡಿರ್ತಾಳೆ. ಜಾಸ್ತಿ ಬಿಪಿ ಗಂಡಸರಿಗೆ ಕೊಟ್ಟು ದೇವರು ಲೋ ಬೀಪಿ ನಮಗೇನಕ್ಕೆ ಕೊಟ್ಟ ಸಾರ್' ಎಂದರು. ರೊಟ್ಟಿ ಬಾಯಲಿದ್ದು, ಬ್ಯಾಗು ಸಿಗುತ್ತೋ ಇಲ್ಲವೋ ಎನ್ನುವ ಭಾರಿ ಟೆನ್ಷನ್ ತಲೆಯಲ್ಲಿ ತುಂಬಿಕೊಂಡಿದ್ದ ಡಾಕ್ಟ್ರು ಬಿಪಿ ಕೊಂಚ ಏರಿದಂತೆ ಕಂಡಿತು. ಅವರೇನೂ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ಚಂದಮಾಮ ಕಥೆಯ ರಾಜಕುಮಾರನಂತಿರುವ ಅವರ ಸೇಬಿನ ಮುಖ ಬೀಟ್ರೋಟ್ ಕೊಯ್ದು ಇಟ್ಟಂತೆ ಕೆಂಪಾಗಿತ್ತು.

ಆ ಹಳ್ಳಿಯ ಜನ ಒಳ್ಳೆಯವರೋ? ಅಥವಾ ಬ್ಯಾಗನ್ನು ನೋಡೇ ಇರಲಿಲ್ಲವೋ ಅಂತು ಬ್ಯಾಗು ಸಿಕ್ಕಿತು. ಪಾಪ ಕೃಷ್ಣಕುಮಾರಿ ಹೆಕ್ಕಿ ತಂದರು. 'ನಮಗೆ ನಿಮ್ಮಂತಹ ಪಟಗಾರರು ಬಂದು ಕೊಡುವ ದುಡ್ಡೇ ಬದುಕೆಂದು, ಉಳುಮೆಗೆ ಇಲ್ಲಿ ಜಾಗವೇ ಇಲ್ಲವೆಂದೂ. ಉದ್ಯೋಗವೇ ಹುಟ್ಟದ ಈ ಕಗ್ಗಾಡಿನಲ್ಲಿ ಹುಟ್ಟಿರುವುದೇ ಒಂದು ಶಾಪ' ಎಂದು ಅರುಣಿಮಾ ಕಣ್ಣೀರು ತುಂಬಿಕೊಂಡರು. ಸ್ವರ್ಗಕ್ಕೆ ಸಮಾನವಾಗಿ ಕಾಣುವ ಈ ಜಾಗೆ ಒಂದು ದಿನ ಬಂದಿದ್ದು ಹೋಗುವ ನಮಗೆ ಖಂಡಿತಾ ಸುಖವಾಗಿ ಕಾಣುತ್ತದೆ. ಬಣ್ಣ ಬಣ್ಣದ ಹಕ್ಕಿಗಳು ನೆಲೆಸಿರುವ ಕಾರಣ ನಮಗೆ ಮಾತ್ರ ಇದು ಅಮೂಲ್ಯ ಸ್ಥಳ ಎನಿಸಬಹುದು. ಇಲ್ಲೇ ಹುಟ್ಟಿ ಬೆಳೆಯುವ ಇವರಿಗೆ ಈ ಹಸಿರು ಪರ್ವತಗಳ ಬದುಕೇ ಒಂದು ಸವಾಲು. 'ಇಲ್ಲಿನ ಗಂಡಸರು ಶುದ್ಧ ಸೋಮಾರಿಗಳು. ಕಳ್ಳು ಬೇಸಿ ಕುಡಿವ, ಪುಕ್ಕಟೆ ಸಿಗುವ ಗಾಂಜಾ ಸೊಪ್ಪಿನ ಬೀಡಿ ಎಳೆವ, ಹೆಂಡಿರ ದುಡಿಮೆಗೇ ಜೋತು ಬಿದ್ದ ನಾಲಾಯಕ್‌ಗಳು. ಆಗಾಗ ಭಾರಿ ಹೊಡ್ತಾ ಹೆಂಡ್ತೀರಾ ಕಡೆಯಿಂದ ತಿಂತಾನೆ ಇರ್ತಾರೆ. ನಮ್ಮ ಆಂಟೀನೂ ಏನು ಕಡಿಮೆಯಿಲ್ಲ' ಎಂದು ನ್ಯಾಚುರಲಿಸ್ಟ್ ತೆಳ್ಳಗೆ ನಕ್ಕನು.

ಹಕ್ಕಿಗಳ ಪಟ ತೆಗೆಯಲು ಅರ್ಧಗಂಟೆ ಧ್ಯಾನಸ್ಥ ಸ್ಥಿತಿಯಲ್ಲಿ ಕೂತಿದ್ದೆವು. ನಮ್ಮ ನಿರೀಕ್ಷೆಯ ಸ್ಕೇರ್ಲೆಟ್ ಫೇಸ್ಡ್ ಲಿಯೋ ಚಿಚಾಲ ಓಡಿ ಬಂದಿತು. ಬಲು ಅವಸರದ; ನಿಂತಲ್ಲಿ ನಿಲ್ಲದ; ಕೂತಲ್ಲಿ ಕೂರದ; ಚಪಲಚಿತ್ತದ ಹಕ್ಕಿ ಇದಾಗಿತ್ತು. ಕ್ಯಾಮೆರಾ ಕೀಲಿಸಿ ಫೋಕಸ್ ಫಿಕ್ಸ್ ಮಾಡುವುದರೊಳಗೆ ಮಂಗಮಾಯವಾಗಿ ಮತ್ತೊಂದು ಕಡೆಗೆ ಜಿಗಿಯುತ್ತಿತ್ತು. ಸ್ಪ್ರಿಂಗಿನಂತೆ ಹೊಯ್ದಾಡಿ ಕುಣಿಯುವ ಈ ಪಕ್ಷಿಯ ಸೆರೆ ನಮ್ಮ ಪಾಲಿಗೆ ಒಂದು ಸವಾಲಾಯಿತು. ನಾನು ಗೊಣಗುತ್ತಾ, 'ಅಷ್ಟು ದೂರದಿಂದ ದೇಸಾಂತರ, ದುಡ್ಡು ಕಾಸು ಖರ್ಚು ಮಾಡ್ಕೊಂಡು, ಬೆಟ್ಟ ಹತ್ತಿ ಚಡ್ಡಿ ಹರ್ಕೊಂಡು ಬಂದು ಕೂತಿವಿ. ನಮ್ಮ ಶ್ರಮಕ್ಕೆ ಒಂದು